a) To isse new ration cards 15 days time is normally required.

b) There is no delay.

ಸಾಧನೆ ಸಮಾವೇಶಕ್ಕೆ ಕ.ರಾ.ರ.ಸಾ. ಸಂಸ್ಥೆಯ ಬಸ್ಸುಗಳನ್ನು ಒದಗಿಸಿರುವ ಬಗ್ಗೆ.

7 77. ಶ್ರೀ ಬಸವರಾಜ್ ಪಾಟೀಲ ಅಟ್ಟೂರ, (ಬಸವ ಕಲ್ಯಾಣ):– ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸಾಧನೆಯ ಸಮಾವೇಶಕ್ಕೆ ರಾಜ್ಯದ ವಿವಿಧ ಭಾಗಗಳಿಂದ ಜನರನ್ನು ಕರೆತರಲು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಒದಗಿಸಿದ ಬಸ್ಸುಗಳೆಷ್ಟು ? (ಜಿಲ್ಲಾವಾರು)

ಆ) ಸದರಿ ಬಸ್ಸುಗಳಿಗೆ ತಗಲಿದ ಒಟ್ಟು ವೆಚ್ಚ ಎಷ್ಟು ?

ಇ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಇಲ್ಲಿಯವರೆಗೆ ಸಂದಾಯ ಮಾಡಿದ ಹಣವೆಷ್ಟು ?

ಈ) ಸಾಧನೆಯ ಸಮಾವೇಶಕ್ಕೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳನ್ನು ಕೊಟ್ಟಿದ್ದರಿಂದಾಗಿ ದಿನನಿತ್ಯದ ಎಷ್ಟು ಅನುಸೂಚಿಗಳು ರದ್ದಾಗಿವೆ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ) ಸಾಧನೆಯ ಸಮಾವೇಶಕ್ಕೆ ಒಟ್ಟು 2069 ಬಸ್ಸುಗಳನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಿಂದ ಒಪ್ಪಂದದ ಮೇರೆಗೆ ಕೊಡಲಾಗಿದೆ. ವಿಭಾಗವಾರು ಕೊಟ್ಟಿರುವ ವಾಹನಗಳ ವಿವರ ಈ ಕೆಳಕಂಡಂತೆ ಇರುತ್ತದೆ.

ಕ್ರಮ ಸಂಖ್ಯೆ	ವಿಭಾಗ	ಒಟ್ಟು ವಾಹನಗಳು
1.	ಬೆಂಗಳೂರು (ಕೇಂದ್ರ)	105
2.	ಬೆಂಗಳೂರು ಗ್ರಾಮಾಂತರ	141
3.	ಮಂಗಳೂರು	90
4.	ವಿಜಾಪುರ	32
5.	ಹಾಸನ	229
6.	ರಾಯಚೂರು	38
7.	ಹುಬ್ಬಳ್ಳಿ	80
8.	ದಾವಣಗೆರೆ	160
9.	ಉತ್ತರ ಕನ್ನಡ (ಸಿರಸಿ)	27
10.	ಬಳ್ಳಾರಿ	35
11.	ಬಾಗಲಕೋಟೆ	22
12.	ಗುಲ್ಬರ್ಗಾ	63
13.	ಬೀದರ್	35
14.	ಬೆಂಗಳೂರು ನಗರ ಸಾರಿಗೆ (ಉತ್ತರ ಮತ್ತು ದಕ್ಷಿಣಾ)	299
15.	ಗದಗ	32
16.	ಬೆಳಗಾವಿ	81

17.	ಕೋಲಾರ	300
18.	ಮೈಸೂರು	300
	ಒಟ್ಟು	2069

ಆ) ಒಟ್ಟು ವೆಚ್ಚದ ಮೊತ್ತ ರೂ. 99,79,234-64

ಇ) ಸಂಸ್ಥೆಗೆ ಸಂದಾಯವಾಗಬೇಕಾಗಿದ್ದ ಪೂರ್ತಿ ಹಣವನ್ನು ಒಪ್ಪಂದದ ಮೇರೆಗೆ ವಾಹನಗಳನ್ನು ಕೊಡುವ ಪೂರ್ವದಲ್ಲಿಯೇ ಒಪ್ಪಂದದಾರರಿಂದ ಪಡೆಯಲಾಯಿತು.

ಈ) 1880 ಅನುಸೂಚಿಗಳು ರದ್ದಾಗಿರುತ್ತವೆ.

ಗುಲ್ಬರ್ಗಾ ವಿಶ್ವವಿದ್ಯಾಲಯವನ್ನು ಬಸವೇಶ್ವರ ವಿಶ್ವವಿದ್ಯಾಲಯ ಎಂದು ನಾಮಕರಣ.

781. ಶ್ರೀ ಬಸವರಾಜ ಪಾಟೀಲ ಅಟ್ಟೂರು (ಬಸವ ಕಲ್ಯಾಣ):– ಮಾನ್ಯ ಶಿಕ್ಷಣ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ಗುಲ್ಬರ್ಗಾ ವಿಶ್ವವಿದ್ಯಾಲಯವನ್ನು ಬಸವೇಶ್ವರ ವಿಶ್ವವಿದ್ಯಾಲಯ ಎಂದು ಪುನರ್ ನಾಮಕರಣ ಮಾಡಲು ಸರ್ಕಾರ ತೀರ್ಮಾನ ತೆಗೆದುಕೊಂಡಿದೆಯೇ ?

2) ತಿರುಪತಿಯಲ್ಲಿರುವ ವೆಂಕಟೇಶ್ವರ ವಿಶ್ವವಿದ್ಯಾಲಯವನ್ನು ವೆಂಕಟೇಶ್ವರ ದೇವರ ಹೆಸರಿನಲ್ಲಿ ನಾಮಕರಣ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

3) ಹಾಗಿದ್ದಲ್ಲಿ, ಗುಲ್ಬರ್ಗಾ ವಿಶ್ವವಿದ್ಯಾಲಯದ ಹೆಸರನ್ನು ಬಸವೇಶ್ವರ ವಿಶ್ವವಿದ್ಯಾಲಯ ಎಂದು ನಾಮಕರಣ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೆ ?

ಶ್ರೀ ಎಸ್.ಎಂ. ಯಾಹ್ಯಾ (ಶಿಕ್ಷಣ ಮತ್ತು ವಕ್ಫ್ ಸಚಿವರು):–

1) ಇಲ್ಲ

2) ಹೌದು

3) ಇಲ್ಲ

ರಾಜ್ಯದಲ್ಲಿ ಹೋಟೆಲುಗಳ ತಿಂಡಿ ಹಾಗೂ ಊಟದ ಬೆಲೆ ಏರಿಕೆ.

53. ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು):– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಹೋಟೆಲುಗಳ ತಿಂಡಿ ಹಾಗೂ ಊಟದ ಬೆಲೆ ದಿನ ದಿನಕ್ಕೆ ದುಬಾರಿಯಾಗಿ ಜನಸಾಮಾನ್ಯರಿಗೆ ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಬೆಲೆಗಳನ್ನು ಇಳಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳಾವುವು ?

ಶ್ರೀಮತಿ ಮನೋರಮಾ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವೆಯರು):–